1	2	3	4	5	6
22	Bijapur	427.40	537.66	288.80	275.59
23	Bagalkote	475.60	264.94	346.63	69.92
24	Dharwad	505.30	394.57	272.80	369.16
25	Gadag	507.30	470.68	307.75	245.43
26	Haveri	694.05	794.48	404.45	264.50
27	Uttara Kannada	511.20	573.48	322.38	196.36
28	RDED	255.00	254.47	0.00	0.00
29	B'lore City Corpn.	50.00	50.00	0.00	
30	Director, Agri.Dept.	1285.00	0.00	1000.00	0.00
31	Director,Hort.Dept.	15.00	0.00	0.00	0.00
32	Director, DMC	0.00	15.00	25.00	0.00
33	Int.Subsidy,Apex Bank	3300.00	0.00	0.00	0.00
	TOTAL	**19231.00**	**13936.52**	**10640.28**	**7883.48**

ಬೈಲಹೊಂಗಲ–ಗೋಕಾಕ ಮುಂಗೋಡ ರಸ್ತೆಯನ್ನು ಮೇಲ್ದರ್ಜೆಗೇರಿಸುವುದು

2459 (3146) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನು ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು;

ಆ) ಹಾಗಿದ್ದಲ್ಲಿ ಎಷ್ಟು ಕಿಮೀ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುವುದು;

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಕಿ.ಮೀ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿರುವುದು;

ಈ) ಬೆಳಗಾವಿ ಜಿಲ್ಲೆಯಲ್ಲಿ ಜಿಲ್ಲಾ ಮುಖ್ಯ ರಸ್ತೆಯಾದ i.ಧಾರವಾಡ–ಬೈಲಹೊಂಗಲ ವಯಾ ಬುಡರಕಟ್ಟಿ

ii. ಯಲ್ಲಮನಗುಡ್ಡ–ಬೈಲಹೊಂಗಲ ವಯಾ ಉಡಿಕೇರಿ ಹಾಗೂ

iii. ಸವದತ್ತಿ–ಬೈಲಹೊಂಗಲ ವಯಾ ಹೊಸೂರು ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೆ;

ಉ) ಜಿಲ್ಲಾ ಮುಖ್ಯ ರಸ್ತೆಯಾಗಿರುವ ಧಾರವಾಡ–ಬೈಲಹೊಂಗಲ ವಯಾ ದೊಡ್ಡವಾಡ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೆ.

ಊ) ಹೊರ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಸೇರುವ ಜಿಲ್ಲಾ ಮುಖ್ಯ ರಸ್ತೆಯಾದ ಬೈಲಹೊಂಗಲ–ಗೋಕಾಕ ವಯಾ ಮುರಗೋಡ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 6613 ಕಿಮೀ ಉದ್ದದ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆ ಇದೆ.

ಇ) ಬೆಳಗಾವಿ ಜಿಲ್ಲೆಯಲ್ಲಿ 13.10.67 ಕಿಮೀ ಉದ್ದದ ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಯಾಗಿರುವುದು.

ಈ) ಈ ಮೊದಲಿನ ಜಿಲ್ಲಾ ಮುಖ್ಯ ರಸ್ತೆಯಾದ ಧಾರವಾಡ ಬೈಲಹೊಂಗಲ ವಯಾ ಬುಡರಕಟ್ಟಿ ರಸ್ತೆಯನ್ನು ಪರಿವರ್ತಿಸಲು ನೂತನ ರಾಜ್ಯ ಹೆದ್ದಾರಿಯನ್ನಾಗಿ ಮುಂಗಸೋಳೆ (ರಾಜ್ಯ ಗಡಿಯಿಂದ) ಮಮಿಗಟ್ಟಿ (ಧಾರವಾಡ) ಪ್ರಸ್ತಾವನೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಸದ್ಯಕ್ಕೆ ಎರಡು ರಸ್ತೆಗಳ

ಉ) ಹೌದು ನೂತನ ರಾಜ್ಯ ಹೆದ್ದಾರಿಯನ್ನಾಗಿ " ಕಲಘಟಗಿ ಗೋಕಾಕ್ ಎಸ್‌ಹೆಚ್ " ನ್ನು ಪ್ರಸ್ತಾಪಿಸಲಾಗಿದ್ದು ಈ ರಸ್ತೆಯಲ್ಲಿ ಧಾರವಾಡ ಬೈಲಹೊಂಗಲ ವಯಾ ದೊಡವಾಡ ರಸ್ತೆಯನ್ನು ಸೇರಿರುತ್ತದೆ.

ಊ) ಜಿಲ್ಲಾ ಮುಖ್ಯ ರಸ್ತೆಯಾದ ಬೈಲಹೊಂಗಲ ಗೋಕಾಕ ವಯಾ ಮುರಗೋಡ ರಸ್ತೆಯು ರಾಜ್ಯ ಹೆದ್ದಾರಿಯನ್ನಾಗಿ ಪರಿಶೀಲಿಸಲು ಇರುವ ಪ್ರಸ್ತಾವನೆಯಲ್ಲಿ ಕಲಘಟಗಿ ಗೋಕಾಕ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಸೇರ್ಪಡೆಗೊಂಡಿರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ಯೋಜನೆಯಡಿಯಲ್ಲಿ ಅಭಿವೃದ್ಧಿ

2462 (3149) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಬರಗಾಲ ಕಾಮಗಾರಿ ಕೆಲಸಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿತ್ತು;

ಆ) ಎಷ್ಟು ಕೆಲಸಗಳು ಪೂರ್ಣಗೊಂಡಿರುತ್ತವೆ ಹಾಗೂ ಅರ್ಧಕ್ಕೆ ನಿಂತ ಕೆಲಸಗಳನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗುವುದು;

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಗೋಶಾಲೆಗಳನ್ನು ತೆರೆಯಲಾಗಿದೆ;

ಈ) ಗೋಶಾಲೆಗಳನ್ನು ತೆರೆಯದೇ ಇರುವುದರಿಂದ ರೈತರು ತಮ್ಮ ದನಗಳನ್ನು ಕಸಾಯಿಖಾನೆಗೆ ಕಳುಹಿಸಲು ಕಟುಕರಿಗೆ ಮಾರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಹಾಗಿದಲ್ಲಿ, ರೈತರು ದನಗಳನ್ನು ಕಟುಕರಿಗೆ ಮಾರುವುದನ್ನು ತಡೆಗಟ್ಟಲು ಬೆಳಗಾವಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದೆ;

ಊ) ಬೈಲಹೊಂಗಲ ಮತಕ್ಷೇತ್ರದಲ್ಲಿ ಅರ್ಧಕ್ಕೆ ನಿಂತ ಬರಗಾಲ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವ ವಿಶೇಷವಾದ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಬೆಳಗಾವಿ ಜಿಲ್ಲೆಯಲ್ಲಿ 2003–04 ರಲ್ಲಿ ಉದ್ಯೋಗ ಸೃಜನೆಯ ಕಾಮಗಾರಿಗಳಿಗಾಗಿ ರೂ.356.25 ಲಕ್ಷ ಹಾಗೂ ಕುಡಿಯುವ ನೀರಿಗಾಗಿ ರೂ.463.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಆ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 2559 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 1443 ಕಾಮಗಾರಿಗಳ ಪ್ರಗತಿಯಲ್ಲಿರುತ್ತವೆ. (ಒಟ್ಟು 4402) ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯ ಅನುದಾನ ನೀಡಲಾಗಿದೆ.

ಇ) ಗೋಶಾಲೆಗಳನ್ನು ಇದುವರೆಗೆ ತೆರೆದಿರುವುದಿಲ್ಲ.

ಈ) ಬೆಳಗಾವಿ ಜಿಲ್ಲೆಯಲ್ಲಿ ಇಂತಹ ಪ್ರಸಂಗ ವರದಿಯಾಗಿರುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.